ರಾಜ್ಯದಲ್ಲಿನ ಸಣ್ಣ ಕಾರ್ಖಾನೆಗಳಿಂದ ಸಂಗ್ರಹವಾಗುವ ಮುಗರ್‌ಕೇನ್ ಸೆಸ್ ಫಂಡ್.

1215(1199) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಇಂಧನ ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸಂಗ್ರಹವಾದ ಮುಗರ್‌ಕೇನ್ ಸೆಸ್ ಫಂಡ್ ಹಣವೆಷ್ಟು ;

2. ಈವರೆಗೆ ಸಕ್ಕರೆ ಕಾರ್ಖಾನೆಗಳಿಗೆ ಮುಗರ್‌ಕೇನ್ ಸೆಸ್ ಫಂಡ್‌ನಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

3. ಪ್ರಸಕ್ತ ಆರ್ಥಿಕ ವರ್ಷಕ್ಕೆ ಈ ಫಂಡಿನಿಂದ ಯಾವಾಗ ಹಣ ಬಿಡುಗಡೆ ಮಾಡಲಾಗುವುದು;

4. ಈ ಹಣ ಬಳಕೆ ಮಾಡಲು ನೂತನ ಮಾರ್ಗಸೂಚಿಗಳನ್ನು ಸೂಚಿಸಲಾಗಿದೆಯೇ;

5. ಸೂಚಿಸಲಾಗಿದ್ದಲ್ಲಿ, ಅವರ ವಿವರಗಳೇನು?

ಶ್ರೀ ಎ. ಕೃಷ್ಣಪ್ಪ (ಇಂಧನ ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

1. ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಪ್ರತಿ ಟನ್ ಕಬ್ಬಿಗೆ ರೂ. 10ರಂತೆ ರಸ್ತೆ ಅಭಿವೃದ್ಧಿ ನಿಧಿ (ರೋಡ್ ಡೆವಲಪ್‌ಮೆಂಟ್ ಸೆಸ್) ಸರ್ಕಾರಕ್ಕೆ ಜಮಾ ಆಗಿರುವುದು ಈ ಕೆಳಕಂಡಂತೆ ಇರುತ್ತದೆ.

1) 1997-98 - ರೂ. 354. 57 ಲಕ್ಷಗಳು

2) 1998-99 - ರೂ. 1014.97 ಲಕ್ಷಗಳು

3) 1999-2000 - ರೂ. 857.25 ಲಕ್ಷಗಳು

2. ಈವರೆಗೆ ರೂ. 1035.35 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಯವ್ಯಯ ಕಲ್ಪಿಸಿ ಹಣ ಬಿಡುಗಡೆ ಮಾಡಲಾಗುವುದು.

4. ಹೌದು.

5. ಹೊಸ ಮಾರ್ಗಸೂಚಿಗಳನ್ನು ನಿಗದಿಪಡಿಸುವ ಸಂಬಂಧ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.